**ದಿನಾಂಕ 19.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ಪಾಟೀಸವಾಲು- ವಾದಿ ಪರ ಶ್ರೀ.ಬಿ.ವಿ.ಆರ್. ವಕೀಲರಿಂದಃ**

ನಾನು ಬಿಡಿಎ ನಲ್ಲಿ ಎರಡು ವರ್ಷಗಳಿಂದ FDA ಆಗಿ ಕರ್ತವ್ಯದಲ್ಲಿದ್ದೇನೆ. ನನಗೆ ಸರ್ವೆ ನಂ.138 ರ ಬಗ್ಗೆ ವೈಯಕ್ತಿಕವಾಗಿ ವಿಷಯ ಗೊತ್ತಿಲ್ಲ ಎಂದರೆ ನಿಜ ಆದರೆ ದಾಖಲೆಗಳನ್ನು ನೋಡಿರುತ್ತೇನೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಸರ್ವೆ ನಂ.138 ಒಟ್ಟಾರೆ 3 ಎಕರೆ 34 ಗುಂಟೆ ಜಮೀನು ಆಗಿರುತ್ತದೆ. ದಾವಾ ಆಸ್ತಿ 7200 Sq feet ಆಸ್ತಿಯಾಗಿರುತ್ತದೆ. ದಾವಾ ಆಸ್ತಿಯು 3 ಎಕರೆ 34 ಗುಂಟೆಯಲ್ಲಿ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ನಮ್ಮ ನೋಟಿಪಿಕೇಶನ್ ನಲ್ಲಿ ಚೋನಾ ಅಬ್ದುಲ್ ರೆಹಮಾನ್ ರವರ ಹೆಸರು ತೋರಿಸಿಲ್ಲ ಎಂದರೆ ನಿಜ ಏಕೆಂದರೆ ಅದರ ಖಾತೆದಾರರು ಚೋನಾ ಅಬ್ದುಲ್ ರಜಾಕ್ ಆಗಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಆ ಸಮಯದಲ್ಲಿ ಚೋನಾ ಅಬ್ದುಲ್ ರಜಾಕ್ ರವರು ಖಾತೆದಾರರು ಆಗಿರುತ್ತಾರೆಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ನಿಜ ಏಕೆಂದರೆ ನೋಟಿಪಿಕೇಶನ್ ಮಾಡುವಾಗ RTC ನಲ್ಲಿ ಇದ್ದ ಹೆಸರಿನ ಪ್ರಕಾರ ನೋಟಿಪಿಕೇಶನ್ ಮಾಡಿರುತೇವೆ. ಸರ್ವೆ ನಂ.138 ಚೋನಾ ಅಬ್ದುಲ್ ರಜಾಕ ರವರಿಗೆ ಸೇರಿದ ಆಸ್ತಿಯಾಗಿರುವುದಿಲ್ಲ ಆದರೆ ಚೋನಾ ಅಬ್ದುಲ್ ರೆಹಮಾನ್ ರವರಿಗೆ ಸೇರಿದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ನಿ.ಡಿ.4 ಮಹಜರನಲ್ಲಿ ಕೂಡ ಚೋನಾ ಅಬ್ದುಲ್ ರಜಾಕರವರ ಹೆಸರು ನಮೂದಾಗಿರುವುದಿಲ್ಲ ಏಕೆಂದರೆ ಅದರಲ್ಲಿ ಕೇವಲ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಮಾತ್ರ ಬರೆಯುತ್ತಾರೆ ಮತ್ತು ಅದರಲ್ಲಿ ರಜಾಕ್ ರವರ ಸಹಿ ಇರುತ್ತದೆ

This is a True Copy of the Court Records Online. Authenticated @ districts.ecourtsindia.com/cnr/KABC0A0032802019/truecopy/order-3.pdf

ಎಂದು ಸಾಕ್ಷಿ ನುಡಿಯುತ್ತಾರೆ. ನಿ.ಡಿ.4 ಒಂದು ಪ್ರಿಂಟೆಡ್ ಫಾರ್ಮೆಟ್ ಆಗಿರುತ್ತದೆ ಎಂದರೆ ಸರಿಯಲ್ಲ. ಅದರಲ್ಲಿ ಕೇವಲ ಹೆಸರುಗಳು ಮಾತ್ರ ಬರೆಯಲಾಗಿದೆ ಎಂದರೆ ನಿಜ ಆದರೆ ಉಳಿದ ವಿವರಗಳು ಇರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ನಿ.ಡಿ.4 ರಲ್ಲಿ ಪಂಚರ ಹೆಸರು ಮತ್ತು ವಿಳಾಸ ನಮೂದಾಗಿಲ್ಲ ಎಂದರೆ ನಿಜ. ನಿ.ಡಿ.4 ನಮ್ಮ ಕಛೇರಿಯಲ್ಲಿ ಸೃಷ್ಠಿಸಿದ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ನಿ.ಡಿ.4 ಸೃಷ್ಠಿಸಿದ ದಾಖಲೆಯಾದ ಕಾರಣ ಮೂಲ ಪ್ರತಿಯನ್ನು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.138 ರಲ್ಲಿ ಯಾವ ವ್ಯಕ್ತಿಗಳಿಗೆ ಸೈಟ್ ಅಲಾಟ್ ಆಗಿರುತ್ತದೆ ಎಂದು ಅದರ ವಿವರ ಪಟ್ಟಿ ಹಾಜರುಪಡಿಸಿರುವುದಿಲ್ಲ ಎಂದರೆ ನಿಜ. ಸದರಿ ಸರ್ವೆ ನಂ.138 ರ ಲೇಔಟ್ ಪ್ರತಿಯನ್ನು ಕೂಡ ಹಾಜರುಪಡಿಸಿಲ್ಲ ಎಂದರೆ ನಿಜ ಆದರೆ ಅದು ಇಂಜಿನಿಯವರಿಗೆ ಸಂಬಂದಪಟ್ಟ ದಾಖಲೆಯಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಸರ್ವೆ ನಂ.138 ರಲ್ಲಿ ಯಾವುದೇ ಲೇಔಟ್ ಆಗಿಲ್ಲ ಮತ್ತು ಅಬ್ದುಲ್ ಚುನಾ ರೆಹಮಾನ ರವರ ಆಸ್ತಿಯನ್ನು ಸ್ವಾಧೀನಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.138 ರಲ್ಲಿ ಈಗಾಗಲೇ ಹಲವು ಮನೆಗಳು, ಶಾಲೆಗಳು, ಚರ್ಚ ಮತ್ತು ಮಸಜೀದ್ ಗಳು ಅಸ್ತಿತ್ವದಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಆದರೆ ನಾವು ಸ್ವಾಧೀನ ಪಡೆದಾಗ ಅದು ಖಾಲಿ ಜಾಗ ಆಗಿತ್ತು. ನಾವು ಸ್ವಾಧೀನ ಪಡೆದುಕೊಂಡಾಗ ಸರ್ವೆ ನಂ.138 ಖಾಲಿ ಜಾಗ ಆಗಿತ್ತು ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಆದರೆ ದಾಖಲೆಗಳ ಪ್ರಕಾರ ಖಾಲಿ ಜಾಗವಿರುತ್ತದೆ. ನಾನು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABC0A0032802019/truecopy/order-3.pdf
www.ecourtsindia.com

OS 26233/2019
DW-2

ಅದೇ ರೀತಿ ಎಲ್ಲ ದಾಖಲೆಗಳನ್ನು ಕೂಡ ಸೃಷ್ಠಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

57 ನೇ ಅ.ನ.ಸಿ. ನ್ಯಾಯಾಧೀಶರು
(ಸಿಸಿಎಚ್-58), ಮೇಯೋ ಹಾಲ್ ವಿಭಾಗ,
ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC0A0032802019/truecopy/order-3.pdf

www.ecourtsindia.com